

## ಪೆಟ್ರೋಲ್ ಬಂಕ್‌ಗೆ ಬಂದ ಎತ್ತಿನ ಗಾಡಿ!

ಸಿಂಗಾರಗೊಂಡಿರುವ ಈ ಎತ್ತಿನ ಗಾಡಿ ನಿಜವಾದ್ದು ಅಂದುಕೊಂಡಿರಾ? ನಿಮ್ಮ ಗ್ರಹಿಕೆ ತಪ್ಪು. ಇದು ಮರದ ಗಾಡಿಯಲ್ಲ, ಸಿಮೆಂಟ್‌ನಿಂದ ರೂಪುಗೊಂಡಿರುವ ಎತ್ತಿನ ಬಂಡಿ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ–ಪಾಂಡವಪುರ ಮಾರ್ಗ ನಡುವೆ ಇರುವ ಪೆಟ್ರೋಲ್ ಬಂಕ್ ಮುಂಭಾಗದಲ್ಲಿರುವ ಈ ಎತ್ತಿನ ಬಂಡಿ ಎಲ್ಲರ ಗಮನಸೆಳೆಯುತ್ತಿದೆ. ಬಂಕ್ ಮಾಲೀಕರು ಆಕರ್ಷಣೆಗಾಗಿ ಇದನ್ನು ನಿರ್ಮಿಸಿದ್ದಾರೆ.

ಮಂಡ್ಯದಲ್ಲಿ ಕೆಲವೇ ವರ್ಷಗಳ ಹಿಂದೆ ಬಹುಪಾಲು ರೈತರು, ಎತ್ತು ಹಾಗೂ ಮರದ ಗಾಡಿ ಹೊಂದಿದ್ದರು. ಈಗ ಕಾಲ ಬದಲಾಗಿದೆ. ಕೃಷಿ ಚಟುವಟಿಕೆಗೂ ಯಾಂತ್ರಿಕ ಉಪಕರಣಗಳು ಬಂದ ಮೇಲೆ ಎತ್ತು ಸಾಕುವುದು ಕಡಿಮೆಯಾಗಿದೆ. ಮರದ ಗಾಡಿ ಬದಲಿಗೆ ಟೈರ್ ಗಾಡಿಗಳು ಬಂದಿವೆ. ಈ ಎತ್ತಿನ ಗಾಡಿಗಳ ಸವಿ ನೆನಪಿಗಾಗಿಯೇ ಬಂಕ್ ಮಾಲೀಕ ಗಾಡಿಯ ಪ್ರತಿಕೃತಿ ನಿರ್ಮಿಸಿದ್ದಾರೆ. ಈ ಎತ್ತಿನ ಮರದ ಗಾಡಿಯು ನೋಡುಗರ ಚಿತ್ತ ಸೆಳೆಯುತ್ತಿದೆ.

–ಸಿ. ಸಿದ್ದರಾಜು ಆಲಕೆರೆ, ಮಂಡ್ಯ

## ಪಾತಾಳ ಗಡ್ಡಿ



ನಲ್ಲಿ ತಿರುಗಿಸಿದ ಕಡೆ ಎಲ್ಲ ಓವರ್‌ಹೆಡ್ ಟ್ಯಾಂಕ್‌ನಿಂದ ನೀರು ಬರುವ ಈ ಕಾಲದವರಿಗೆ ಈ ವಸ್ತು ಏನೆಂದು ಗೊತ್ತಿರುವುದಿಲ್ಲ. ಆದರೆ ಹಿಂದಿನ ಕಾಲದಲ್ಲಿ ಇದರ ಉಪಯೋಗ ಬಹಳ ಇತ್ತು. ಇದರ ಹೆಸರು ಪಾತಾಳ ಗರಡಿ. ಉತ್ತರ ಕರ್ನಾಟಕದ ಭಾಷೆಯಲ್ಲಿ ಪಾತಾಳ ಗಡ್ಡಿ. ಹಿಂದೆ ಬಾವಿಯಿಂದ ನೀರು ಸೇದಬೇಕಾಗಿದ್ದ ಕಾಲದಲ್ಲಿ ಹಗ್ಗ ತುಂಡಾಗಿ ಬಾವಿಗೆ ಬಿದ್ದ ಕೊಡಪಾನ, ಬಿಂದಿಗೆ, ನೀರು ಸೇದುವ ಚಿಕ್ಕ ಬಕೆಟ್ ಮುಂತಾದವುಗಳನ್ನು ಹೊರತೆಗೆಯಲು ಇದನ್ನು ಬಳಸುತ್ತಿದ್ದರು. ಭಾರವಾದ ಕಬ್ಬಿಣದಿಂದ ತಯಾರಿಸಲಾದ ಇದಕ್ಕೆ ಸುತ್ತಲು ಕಬ್ಬಿಣದ ಚೂಪಾದ ಬಹಳಷ್ಟು ಕೊಕ್ಕೆಗಳಿರುತ್ತಿದ್ದವು. ಮೇಲೆ ಒಂದು ಹಗ್ಗ ಕಟ್ಟಲು ಕೊಂಡಿ ಇರುತ್ತಿತ್ತು. ಮೇಲಿನ ಆ ಕೊಂಡಿಗೆ ಹಗ್ಗ ಕಟ್ಟಿ ಬಾವಿಯ ತಳದವರೆಗೂ ಬಿಟ್ಟು ಮೇಲಿನಿಂದ ಹಗ್ಗವನ್ನು ಬಾವಿಯೊಳಗೆ ಸುತ್ತ ತಿರುಗಿಸುತ್ತಿದ್ದರು. ಆಗ ಬಾವಿಗೆ ಬಿದ್ದ ಆ ವಸ್ತುವಿನ ಬಾಯಿಗೆ ಅಥವಾ ತುಂಡಾದ ಹಗ್ಗ ಈ ಪಾತಾಳ ಗರಡಿಯ ಯಾವುದಾದರೂ ಕೊಕ್ಕೆಗೆ ಸಿಕ್ಕಿ ಹಾಕಿಕೊಳ್ಳುತ್ತಿತ್ತು. ನಿಧಾನವಾಗಿ ಇದನ್ನು ಮೇಲಕ್ಕೆ ಎಳೆದುಕೊಳ್ಳುತ್ತಿದ್ದರು. ಇದರ ಜೊತೆಯಲ್ಲಿ ಸಿಕ್ಕಿಬಿದ್ದ ಆ ವಸ್ತುವು ಮೇಲೆ ಬರುತ್ತಿತ್ತು.

–ಶರದ ಕುಲಕರ್ಣಿ, ಬೀದರ್

## ಧ್ವನಿ ಕೇಳಿಸುವ ಧಣಿ



ದಶಕಗಳ ಹಿಂದೆ ಇನ್ನೂ ದೃಶ್ಯ ಮಾಧ್ಯಮ ಎಲ್ಲರ ಕೈಗೆಟುಕದಿರುವಾಗ ಸಿನಿಮಾ, ಯಕ್ಷಗಾನ, ಹಾಡು, ನಾಟಕ ಎಲ್ಲವೂ ಧ್ವನಿಸುರುಳಿಗಳ ಮೂಲಕ ಲಭ್ಯವಾಗುತ್ತಿದ್ದವು. ವಿದ್ಯುತ್ ಇಲ್ಲವಾದರೂ ಬ್ಯಾಟರಿಗಳ ಮೂಲಕ ನಡೆಯುತ್ತಿದ್ದ ಸಾಧನಗಳ ಒಳಗೆ ಧ್ವನಿಸುರುಳಿಗಳನ್ನು ಇಳಿಸಿ ಎಲ್ಲ ಕಾರ್ಯಕ್ರಮಗಳನ್ನೂ ಆಲಿಸಲು ಹಳ್ಳಿಗಳಲ್ಲಿಯೂ ಸಾಧ್ಯ ಇತ್ತು. ಆದರೆ ಮೊಬೈಲ್ ಫೋನು ಸರ್ವವ್ಯಾಪಿಯಾದ ಬಳಿಕ ಧ್ವನಿಸುರುಳಿಗಳ ತಯಾರಿಕೆಯೂ ಮೂಲೆ ಸೇರಿದ ಕಾರಣ ಅದನ್ನು ಮಾತನಾಡಿಸುವ ಸಾಧನವೂ ಬಳಕೆಯಿಂದ ದೂರವಾಯಿತು. ಬಂಟ್ವಾಳ ಮಂಚಿಯ ಶಿವಶಂಕರ ಭಟ್ಟರ ಸಂಗ್ರಹದಲ್ಲಿ ಅದಿನ್ನೂ ಉಳಿದುಕೊಂಡಿದೆ.

–ಪ. ರಾಮಕೃಷ್ಣ ಶಾಸ್ತ್ರಿ



## ಬಹೂಪಯೋಗಿ ಬಂದರಿಕೆ

ಕೃಷಿ ಚಟುವಟಿಕೆಗಳಿಗೆ ಅತ್ಯಗತ್ಯವಾದ ಸಾಧನಗಳನ್ನು ತಯಾರಿಸಿಕೊಳ್ಳಲು ಬೇಕಾದ ಕಚ್ಚಾ ಸಾಮಗ್ರಿಗಳ ಮೂಲ ಕಾಡೇ ಆಗಿದೆ. ಕಾಡಿನಲ್ಲಿ ಬೆಳೆಯುವ ಬಳ್ಳಿಯಿಂದ ಹಿಡಿದು ಬೃಹತ್ ಗಾತ್ರದ ಮರಗಳನ್ನು ಮಾನವನು ತನ್ನ ಕೃಷಿ ಚಟುವಟಿಕೆಗಳಿಗೆ ಅಗತ್ಯವಾದ ಸುಕ್ಕ, ಮಡಿಕೆ, ಕುಂಟೆ, ನೊಗ, ಈಚು, ಹಗ್ಗ, ಬರಲು, ಪೊರಕೆ ಮುಂತಾದವುಗಳನ್ನು ತಯಾರಿಸುವ ಜ್ಞಾನ ಮತ್ತು ಕೌಶಲ್ಯ ಅವನಿಗೆ ಸಿದ್ಧಿಸಿದೆ. ಹೀಗೆ ನಮ್ಮ ಬಯಲು ಸೀಮೆಯ ಕುರುಚಲು ಕಾಡುಗಳಲ್ಲಿ ಬೆಳೆಯುವ ಈ ಬಂದರಿಕೆಯು ಬಹೂಪಯೋಗಿಯಾಗಿದೆ.

ದನದ ಕೊಟ್ಟಿಗೆಯನ್ನು ಶುಭ್ರಗೊಳಿಸಲು ಅತ್ಯಗತ್ಯವಾದ ಬರಲು, ಪೊರಕೆಗಳನ್ನು ಈ ಸಸ್ಯಗಳ ಸೆಳ್ಳೆಗಳಿಂದ ತಯಾರಿಸುತ್ತಾರೆ. ದನಮೇಕೆ ಕೊಟ್ಟಿಗೆಗಳ ನೆರಿಕೆಗಳನ್ನು ಕಟ್ಟಲು ಇದನ್ನು ಬಳಸುತ್ತಾರೆ. ಹಾಗೆಯೇ ಮನುಷ್ಯರಿಗೆ ಭಟ್ಟಿ ಬಿದ್ದಾಗ (ಹೊಟ್ಟೆ ಉಬ್ಬರ ಆಗುವುದು) ಇದರ ಎಲೆಗಳಿಂದ ಒಂದು ಚೂಡನ್ನು ಮಾಡಿ, ಭಟ್ಟಿ ಬಿದ್ದ ಸ್ಥಳದಲ್ಲಿ ಇಟ್ಟು ಬಟ್ಟೆಯಿಂದ ಬಿಗಿಯಾಗಿ ಕಟ್ಟಿದರೆ ಭಟ್ಟಿ ದೂರವಾಗುತ್ತದೆ ಎನ್ನುತ್ತಾರೆ ರೈತ ಮಹಿಳೆ ಗೌರಮ್ಮ. ಮಳೆಗಾಲದಲ್ಲಿ ಇದೇ ಬಂದರಿಕೆಯನ್ನು ಕೊಯ್ದು ದನಗಳ ಕಾಲಡಿಗೆ ಹಾಕಿದರೆ ಅವುಗಳು ಬೆಚ್ಚಗೆ ನಿದ್ರಿಸುತ್ತವೆ ಎಂದೂ ಅವರು ಹೇಳುತ್ತಾರೆ.

–ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟೆ